730

ಮೈಸೂರ ಗೆಜಿಟ್.

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ|| 25, ಸ್ 1890.

☞ ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯೂಗವರ್ಟಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗ್ಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಇಸ್ತಿಹಾರ್ ನಾಮೆ.

ಫಾರೆಸ್ಟ್ ಇಲಾಖೆ.

ತಾರೀಖು 25ನೇ ಸೆಪ್ಟಂಬರ್ 1890.

ಸ್ 1878ನೇ ಇಸವಿ ಫಾರೆಸ್ಟ್ ರೂಲ್ಸ್ 9ನೇ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಿಸಿರುವ ಮನ್ನಾ ಜಂಗ್ಲಿಗಳ ಮತ್ತು ಸಂಬಲ್ ಪ್ಲಾಂಟೇಷನ್ ಇವುಗಳ ಚತುರ್ಗಡಿಗಳು ಸಕಲ ಜನಗಳ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತವೆ.

I. ಗಂಗವ್ವನ ಸರಾ ಮನ್ನಾ ಜಂಗ್ಲಿ.

ಶಿಕಾರಿಪುರ ತಾಲ್ಲೂಕು ಮತ್ತು ಹೊನ್ನಾಳಿ ತಾಲ್ಲೂಕು ಇದರ ವಿಸ್ತೀರ್ಣ ಸುಮಾರು 2 ಚದರ ಮೈಲು.

ಉತ್ತರಕ್ಕೆ—ಕಡದು ಇರತಕ್ಕ ಡಿವಾರ್ಕೇಷನ್ ರಸ್ತೆಯು ಇಟ್ಟಿಗೆಹಳ್ಳಿ ಮುದ್ದನಹಳ್ಳಿ ವಡೇರಪುರ ಈ ಮೂರು ಗ್ರಾಮಗಳ ಗಡಿ ಬಾಂದಿನಿಂದ ಪುರು ಆಗಿ ಬಳ್ಳೂರು ಜಕ್ಕನಕೊಪ್ಪ ಈ ಯರಡು ಗ್ರಾಮಗಳ ಗಡಿ ಬಾಂದುಗಳ ವರಗೆ ಹೋಗಿ ಕೇರುತ್ತದೆ.

ಪೂರ್ವಕ್ಕೆ—ಮೇಲೆ ನಮೂದಾದ ಆಖೈರು ಗಡಿ ಬಾಂದುನಿಂದಾ ಹೊಸಕೊಪ್ಪ ನರಗನಕೆರೆ ಈ ಯರಡು ಗ್ರಾಮಗಳ ಗಡಿ ಬಾಂದು ಗಳವರಿಗೆ ಹೋಗಿ ಕೇರುತ್ತದೆ.

ದಕ್ಷಿಣಕ್ಕೆ—ಮೇಲೆ ನಮೂದಾದ ಆಖೈರು ಗಡಿ ಬಾಂದುನಿಂದ ಜೋಗ ಅತ್ತಿಬೈಲು ಈ ಯರಡು ಗ್ರಾಮಗಳ ಗಡಿ ಬಾಂದುಗಳ ವರಿಗೆ ಹೋಗಿ ಕೇರುತ್ತದೆ.

ಪಶ್ಚಿಮಕ್ಕೆ—ಮೇಲೆ ಕಂಡ ಬಾಂದುಗಳಿಂದ ಡಿವಾರ್ಕೇಷನ್ ಲೈನ್ ಪುರು ಹೊರಟ ಸ್ಥಳಕ್ಕೆ ಕೂಡುತ್ತದೆ.

ಚಂದ್ರಕಲ್ಲ ಮನ್ನಾ ಜಂಗ್ಲಿ.

ಉತ್ತರಕ್ಕೆ—ಕಡದು ಇರತಕ್ಕ ಡಿವಾರ್ಕೇಷನ್ ರಸ್ತೆಯು ಅಡಗಂಟಿ ಭಕ್ತನಕೊಪ್ಪ ವರಹ ಈ ಮೂರು ಗ್ರಾಮಗಳ ಗಡಿ ಬಾಂದುನಿಂದ ಪುರು ಆಗಿ ತೀರ್ಥಹಾಳು ತುಂಬಿನಕಟ್ಟೆ ವರಹ ಈ ಮೂರು ಗ್ರಾಮಗಳ ಗಡಿ ಬಾಂದುಗಳವರಿಗೆ ಬಂದು ಕೇರುತ್ತದೆ.

ಪೂರ್ವಕ್ಕೆ—ಮೇಲೆ ನಮೂದಾದ ಆಖೈರು ಬಾಂದುನಿಂದ ಅಂಬುರಗೊಪ್ಪ ಕುಟ್ರಹಳ್ಳಿ ಈ ಯರಡು ಗ್ರಾಮಗಳ ಗಡಿ ಬಾಂದು [illegible] ಸೇರುತ್ತದೆ.

[illegible] ಮೇಲೆ ನಮೂದಾದ ಆಖೈರು ಬಾಂದುನಿಂದ ಜಕ್ಕನಹಳ್ಳಿ ಮನೆರಹಳ್ಳಿ ಈ ಯರಡು ಗ್ರಾಮಗಳ ಗಡಿ ಬಾಂದುಗಳ

[illegible] ಬಾಂದುಗಳಿಂದ ಡಿವಾರ್ಕೇಷನ್ ಲೈನ್ ಪುರು ಹೊರಟ ಸ್ಥಳಕ್ಕೆ ಬಂದು ಕೂಡುತ್ತದೆ.

731

ನಂ. 9. ತಾರೀಖು 29ನೇ ಸೆಪ್ಟಂಬರ್ 1890.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೈಸೂರು ದೇಶದಲ್ಲಿ ವುತ್ಪತ್ತಿಯಾದ ಗಂಧದ ಸಾಲೀಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬಾಜ್ಯಾದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಅಯಾಯ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು ವ ಫಾರೆಸ್ಟ್ಟ ಆಫೀಸರರುಗಳಿಂದ ನಡಿಸಲ್ಪಡುವವು.

ಶಿವಮೊಗ್ಗಾ ಡಿಸ್ಟ್ರಿಕ್ಟು ಶಿಕಾರಿಪುರದ ಕೋಠಿ	14ನೇ ನವಂಬರ್ 1890	ಹೆಚ್ಚು ಕಡಮೆ	250 ಟನ್‌ಗಳು.
ಶಿವಮೊಗ್ಗಾ ..	ಡಿಟೋ—17ನೇ	ಡಿಟೋ	450 ಡಿಟೋ
ತೀರ್ಥಹಳ್ಳಿ ..	ಡಿಟೋ—22ನೇ	ಡಿಟೋ	100 ಡಿಟೋ
ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು	ಡಿಟೋ—28ನೇ	ಡಿಟೋ	200 ಡಿಟೋ
ಹಾಸನ ಡಿಸ್ಟ್ರಿಕ್ಟು ಹಾಸನ	ಡಿಟೋ— 4ನೇ	ಡಿಸೆಂಬರ್	300 ಡಿಟೋ
ಮೈಸೂರು ಡಿಸ್ಟ್ರಿಕ್ಟು ಶ್ರೀರಂಗಪಟ್ಟಣ	ಡಿಟೋ—10ನೇ	ಡಿಟೋ	350 ಡಿಟೋ
ಹುಣಸೂರು ಡಿಟೋ	ಡಿಟೋ—15ನೇ	ಡಿಟೋ	450 ಡಿಟೋ
ಬೆಂಗಳೂರು ಡಿಸ್ಟ್ರಿಕ್ಟು	ಡಿಟೋ—20ನೇ	ಡಿಟೋ	150 ಡಿಟೋ

ಹರಾಜಿನ ಷರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ಮರ್ಕುಂಡಗಳ 34, 35ನೇ ನಂಬರ್ ಗೆಜೆಟ್‌ಗಳಲ್ಲಿ ಫಾಯಿಷ್ ಮಾಡಲ್ಪಟ್ಟ ಇಸ್ತಿಹಾರ್‌ಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್‌ಗಳು ಹರಾಜ್ ಕಾಲದಲ್ಲಿ ವೋದಲ್ಪಡುವವು.

ನೋಟಿಸ್.

ತಾರೀಖು 9ನೇ ಅಕ್ಟೋಬರ್ ಸ್ಯ 1890.

ಇದರಿಂದ ತಿಳಿಯಪಡಿಸುವದೇನಂದರೆ ಇನ್ನೊಂದು ಹುಕ್ಕುಂ ಕೊಡುವವರಿಗೂ ಕಡೂರು ಡಿಸ್ಟ್ರಿಕ್ಟು ಬೀರೂರು ಡಿಪೋದಲ್ಲಿ ತೇಗ ಮತ್ತು ಇತರ ತರಹಾ ನಾಟಾಗಳು ಮತ್ತು ಬೊಂಬುಗಳು ಇದರಡೀಲಿ ಕಂಡ ದರಗಳಂತೆ ಬಿಕರಿ ಮಾಡಲ್ಪಡುವವು.

			ರೂ.	ಆ.	ಪೈ.
ತೇಗ ..	ಅವ್ವಲ್ ತರಹಾ	ಸಲೆ ಅಡಿ 1ಕ್ಕೆ	1	11	0
ಡಿಟೋ ..	ದುಯ್ಯಂ ಡಿಟೋ	ಡಿಟೋ	1	7	0
ಡಿಟೋ ..	ಸಿಯ್ಯಂ ಡಿಟೋ	ಡಿಟೋ	1	3	0
ಮನ್ನಾಜಾತಿ ..	ಅವ್ವಲ್ ತರಹಾ	ಡಿಟೋ	1	0	0
ಡಿಟೋ ..	ದುಯ್ಯಂ ಡಿಟೋ	ಡಿಟೋ	0	14	0
ಕಾಡುಜಾತಿ ..	ಅವ್ವಲ್ ಡಿಟೋ	ಡಿಟೋ	0	11	0
ಡಿಟೋ ..	ದುಯ್ಯಂ ಡಿಟೋ	ಡಿಟೋ	0	10	0
ತೇಗದ ಸರಾ ..	..	ಡಿಟೋ	0	15	0
ಕಾಡು ಸರ ..	..	ಡಿಟೋ	0	9	0
ಸಂಣ ಬೊಂಬುಗಳು	(100ಕ್ಕೆ)		6	4	0
ದೊಡ್ಡ ಬೊಂಬುಗಳು ..	ಡಿಟೋ		18	0	0

ಎಲ್. ರಿಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 18ನೇ ಮಾಹೇ 1890.

ನಂ. 1.—ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀ ವ ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆಕಂಡ ಜೋಡಿ ವ ಕಾಯಂಗುತ್ತಾ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮಗಳು ಜಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಮಾ[illegible] ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯ್ತು 15 ದಿನಗಳೊಳಗಾಗಿ ಪಾವತಿ ಮಾ[illegible] ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.